ಬಗ್ಗೆ ನಾನೊಬ್ಬನೇ ನಿರ್ಧರಿಸಲು ಸಾಧ್ಯವಿಲ್ಲ. ನಾಳೆ ಭಾನುವಾರ ಪ್ರಾರ್ಥನೆಯ ವೇಳೆಗೆ ನೀವೂ ಬಂದು ಬಿಡಿ, ಜನರನ್ನೇ ಕೇಳಿಬಿಡೋಣ' ಎಂದರು.

ಯೋಜಿಸಿದಂತೆ ಸಾರಾಭಾಯ್, ಅಬ್ದುಲ್ ಕಲಾಂ ಮತ್ತು ಹವಾಮಾನ ವಿಜ್ಞಾನಿ ಪಿಶರೋಡಿಯವರು ಚರ್ಚ್‌ನಲ್ಲಿ ಬೆಳಗಿನ ಪ್ರಾರ್ಥನೆಗೂ ಮುಂಚೆ ಹಾಜರಿದ್ದರು. ಪ್ರಾರ್ಥನೆ ಮುಗಿದ ನಂತರ ಪಾದ್ರಿಯು ವಿಕ್ರಂ ಸಾರಾಭಾಯ್‌ರತ್ತ ಕೈತೋರಿಸಿ, 'ಇವರು ದೇಶದ ಬಹುದೊಡ್ಡ ವಿಜ್ಞಾನಿ, ನಾವು ಈಗ ನಿಂತಿರುವ ಜಾಗವನ್ನು ರಾಕೆಟ್ ಉಡಾವಣೆ ಮಾಡಲು ಬಳಸಿಕೊಳ್ಳುತ್ತಾರೆ, ಇಲ್ಲೊಂದು ಲ್ಯಾಬ್ ನಿರ್ಮಿಸುತ್ತಾರೆ, ನಿಮಗೇನಾದರೂ ಅಭ್ಯಂತರವಿದೆಯೇ?' ಎಂದು ಜನರನ್ನು ಕೇಳಿದರು. ಮೀನುಗಾರ ಕುಟುಂಬಗಳಿಗೆ ಸೇರಿದ್ದ ಭಕ್ತರೆಲ್ಲ ಒಕ್ಕೊರಲಿನಲ್ಲಿ 'ನಮಗೇನೂ ಅಭ್ಯಂತರವಿಲ್ಲ' ಎಂದರು! ಆಗ ಸಾರಾಭಾಯ್ ತಂಡಕ್ಕೆ ರಾಕೆಟ್ ಹಾರಿಸಿದಷ್ಟೇ ಖುಷಿಯಾಗಿತ್ತು. ಚರ್ಚ್ ಅನ್ನು ರಾಕೆಟ್ ಉಡಾವಣೆಗೆ ಬಳಸಿಕೊಳ್ಳುವ ದಾಖಲೆ ಪತ್ರಗಳನ್ನು ಸಿದ್ಧಪಡಿಸಿ ಕಾನೂನಾತ್ಮಕವಾಗಿ ಸಾರಾಭಾಯ್ ತಂಡ ತಮ್ಮದಾಗಿಸಿಕೊಂಡು ಕೆಲಸ ಶುರುಮಾಡಿತು.

ಪ್ರಾರ್ಥನೆ ನಡೆಯುತ್ತಿದ್ದ ಜಾಗ ರಾಕೆಟ್ ಜೋಡಣೆಯ ಪ್ರಯೋಗಾಲಯವಾಗಿ ಬದಲಾಯಿತು. ಪಾದ್ರಿ ವಾಸವಿದ್ದ ಮನೆ ಕಚೇರಿಯಾಯಿತು. ದನದ ಕೊಟ್ಟಿಗೆಗಳು ಉಡಾವಣೆಗೆ ಸಂಬಂಧಿಸಿದ ಪರಿಕರಗಳನ್ನಿಡುವ ಉಗ್ರಾಣಗಳಾಗಿ ಬದಲಾದವು. ಸೇಂಟ್ ಮೇರಿ ಮ್ಯಾಗ್ಡಲೀನ್‌ಳ ಮೂರ್ತಿಯಿದ್ದ ಜಾಗದಲ್ಲಿ ಲಾಂಚಿಂಗ್ ಪ್ಯಾಡ್ ನಿರ್ಮಾಣವಾಯಿತು. ಹಳ್ಳಿಯ ಜನರಿಗಾಗಿ ಕೇವಲ ನೂರು ದಿನಗಳಲ್ಲಿ ಹೊಸ ಚರ್ಚ್ ನಿರ್ಮಿಸಿ, ಇಡೀ ಹಳ್ಳಿಯನ್ನೇ ಸ್ಥಳಾಂತರಿಸಲಾಯಿತು. ತನಗೆ ಸೇರಿದ್ದ ಸುಮಾರು ಆರುನೂರು ಎಕರೆ ಜಾಗವನ್ನು ರಾಕೆಟ್ ಜೋಡಣೆ ಮತ್ತು ಉಡಾವಣೆಗೆ ನೀಡಿದ್ದ ಚರ್ಚ್‌ನ ತ್ಯಾಗ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮಗಳ ಇತಿಹಾಸದಲ್ಲೇ ಅತ್ಯಂತ ಪ್ರಮುಖ ವಿದ್ಯಮಾನವಾಗಿ ದಾಖಲಾಯಿತು.






**ವೈಜ್ಞಾನಿಕ ಕುಂಭಮೇಳ**
ಆಂಧ್ರಪ್ರದೇಶದ ಶ್ರೀಹರಿಕೋಟ ಭಾರತದ ಬಾಹ್ಯಾಕಾಶ ಚಟುವಟಿಕೆಗಳ ಕೇಂದ್ರಸ್ಥಳಗಳಲ್ಲೊಂದು; ದೇಶದ ಏಕೈಕ ಉಪಗ್ರಹ ಉಡಾವಣಾ ಕೇಂದ್ರ ಬಂಗಾಳಕೊಲ್ಲಿ ಪೊರೆವ ಈ ಸ್ಥಳದಲ್ಲಿದೆ. ಪ್ರಮುಖ ಉಪಗ್ರಹಗಳ ಉಡಾವಣೆ ಸಂದರ್ಭದಲ್ಲಿ ವಿಜ್ಞಾನದ ಕುತೂಹಲಿಗಳ ಕುಂಭಮೇಳದ ಸ್ಥಳವಾಗಿ ಶ್ರೀಹರಿಕೋಟ ಬದಲಾಗುತ್ತದೆ.